# ಶ್ರೀಪಾದರಾಜರ ಉಗಾಭೋಗಗಳು

ಮುಂದೆ ಕೆಟ್ಟು ಬಂದವರ ಹಿಂದಕೆ ಹಾಕಿಕೊಂಡ ಬಳಿಕ
ಬಂದ ಗುಣದೋಷಗಳ ಎಣಿಸುವರೆ ಎಲೆ ದೇವಾ
ಅಂದವಲ್ಲನಿನ್ನ ಘನತೆ ತಂದೆ ತಾಯಿಗಳು ತಮ್ಮ
ಕಂದನವಗುಣಗಳೆಣಿಸುವರೆ
ಎಂದೆಂದಿಗೆನ್ನ ಉದ್ಧರಿಸಬೇಕೆಲೆ ದೇವ
ಸಂದೇಹವೇತಕೆ ನಮೋ ರಂಗವಿಠಲಯ್ಯ ||

---

ಪರರ ಬಾಗಿಲು ಕಾಯ್ದುಪೋಯ್ತೆನ್ನ ಸಂಸಾರ
ಪರರ ಪಾಡಿ ಪಾಡಿ ಪೋಯ್ತೆನ್ನ ಜನ್ಮವು
ಪರರ ಪೊಗಳಿ ಪೊಗಳಿ ಪೋಯ್ತೆನ್ನ ನಾಲಿಗೆ
ಪರಮ ಕರುಣಾಕರನೆ ದೊಡ್ಡ ಬೆಟ್ಟವ ಕಂಡು
ವರಮೃಗಗಳು ಒದರಿದಂತೆ ಹರುಷವಾಗುವುದೇನೊ
ಕಲ್ಲುಗೋವಿನ ಹಾಲು ಕರು ಬಯಸುವಂತೆ
ಅಕಟಕಟ ಮಂದಮತಿಯು ನಾನಲ್ಲವೆ
ಬಲ್ಲಿದರಾಸೆ ಬಿಡಿಸೊ ಸಿರಿರಂಗವಿಠಲರೇಯ ||

---

ಬಲ್ಲವನು ಉಳ್ಳವನು ನೀನಿರಲು ಭಜಿಸದೆ
ಕ್ಷುಲ್ಲಕರ ಮತವಿಡಿದು ಸುಖ ಬಯಸುವೆ ನಾನು
ಕಲ್ಲುಗೋವಿನ ಹಾಲು ಕರು ಬಯಸಿದಂತೆ ನಾ
ಹಲ್ಲು ಹೋಹದನರಿಯದಕಟಕಟ ಮಂದಮತಿಯು
ಕಳ್ಳಗೋವನು ಹುಲ್ಲುಗಂಜಿಯನೆರೆದು ಸಲಹಿದೆಡೆ ಏನು ಫಲ
ಬಲ್ಲಿದಾಸೆಯ ಬಿಡಿಸೋ ನಮೋ ರಂಗವಿಠಲ ||

---

## ಶ್ರೀಪಾದರಾಜರಿಗೆ ಶ್ರೀ ವಾದಿರಾಜರ ನಮನ

ಶ್ರೀಪಾದರಾಯರ ದಿವ್ಯ ಶ್ರೀಪಾದವ ಭಜಿಸುವೆ || ಪ ||

ವಾಗ್ವಜ್ರಗಳಿಂದ ಮಾಯಾವಾದಿಗಳೆಲ್ಲರ ಬಾಯ
ಬೀಗವಿಕ್ಕಿ ಮುದ್ರಿಸಿದ ಬಿಂಕಗಳ ಬಿಡಿಸುವ || ೧ ||

ವ್ಯಾಸರಾಯರಿಗೆ ವಿದ್ಯಾಭ್ಯಾಸವ ಮಾಡಿಸುವ
ದಾಸರ ನಾಮಗಳಿಂದ ಲೇಸುಲೇಸೆಂದೆನಿಸಿಕೊಂಬ || ೨ ||

ಮಧ್ವಮತದಲ್ಲಿ ಪುಟ್ಟಿ ಮಾಯಾವದಿಗಳ ಕುಟ್ಟಿ
ಗೆದ್ದು ಮೆರೆದನು ದಿಟ್ಟ ಗುರುರಾಯ ಜಗಜಟ್ಟಿ || ೩ ||

ಸುವರ್ಣವರ್ಣತೀರ್ಥರ ಸುತ ಶ್ರೀಪಾದರಾಯರು
ಅವರ ನಾಮಗಳಿಂದ ಕಾವನಯ್ಯ ಕರುಣಾನಿಧಿ || ೪ ||

ವರದ ವೇಂಕಟೇಶನ್ನ ಒಲಿದು ಪೂಜಿಸುವನ
ಕರುಣರಿಂದ ಹಯವದನ ಸಲಹೋ ಯತಿರತ್ನನ || ೫ ||

---